ಪ್ರತಿಬಿಂಬ

**PRATIBIMBA – Multidisciplinary Kannada Research Journal of IIMRD**
**ISSN: 2582-2284**
**Vol-3 Issue 3, Nov-Dec 2021, 58-63**
**©*IIMRD*, Mysuru**

IIMRD JOURNALS
**www.iimrd.com**

# ವಚನ ಸಾಹಿತ್ಯ ಮತ್ತು ವೈಚಾರಿಕತೆ

**ಜಗನ್ನಾಥ. ಎನ್*** **ಮತ್ತು ಡಾ. ಪಿ. ನಾಗರಾಜ****

*ಸಂಶೋಧನಾ ವಿದ್ಯಾರ್ಥಿ ; **ಸಹಾಯಕ ಪ್ರಾಧ್ಯಾಪಕರು,
ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ, ರಾಣಿ ಚೆನ್ನಮ್ಮ ವಿವಿ, ಬೆಳಗಾವಿ.

***ಸಾರಾಂಶ* (Abstract)**

*ಕನ್ನಡ ನಾಡಿನಲ್ಲಿ ಜರುಗಿದ ವಚನ ಸಾಹಿತ್ಯ ಚಳುವಳಿಯಲ್ಲಿ ಪಾಲ್ಗೊಂಡಿದ್ದ ವಚನಕಾರರೆಲ್ಲಾ ವೈಚಾರಿಕ ಪ್ರಜ್ಞೆಯುಳ್ಳವರಾಗಿದ್ದರು. ಅವರು ರಚಿಸಿದ ವಚನ ಸಾಹಿತ್ಯವು ಮಹೋನ್ನತವಾದ ಸಾಮಾಜಿಕ ಎಚ್ಚರಗಳಿಂದ ಕೂಡಿವೆ.ವಚನಕಾರರು ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸಿದವರಾಗಿದ್ದರು, ಹನ್ನೆರಡನೆ ಶತಮಾನದಲ್ಲಿ ಧಾರ್ಮಿಕ, ಸಾಮಾಜಿಕ, ರಾಜಕೀಯ ಮತ್ತು ಸಾಹಿತ್ಯಿಕ ಬದಲಾವಣೆಗಳು ಕಂಡುಬಂದವು. ಕರ್ನಾಟಕದ ಇತಿಹಾಸ ಪ್ರಭುತ್ವದಿಂದ–ಶ್ರೀಸಾಮಾನ್ಯರ ಕಡೆ ಮುಖಮಾಡಿತು. ಪ್ರಜಾಸತ್ತಾತ್ಮಕ ಚಿಂತನೆಗಳಿಂದ ಸರ್ವಸಮಾನತೆಯ ಪಾತಳಿಯ ಮೇಲೆ ಸಮಾಜವನ್ನು ಕಟ್ಟಲು ಪ್ರಯತ್ನಿಸಿ ಯಶಸ್ವಿಯಾದರು. ಅಂದರೆ ನಾವು ಗಮನಿಸಬೇಕಾಗಿರುವುದು ಅಂದು ನಡೆದದ್ದು ಕೇವಲ ಒಂದು ಸುಧಾರಣೆಯಲ್ಲ, ಚಳುವಳಿಯಲ್ಲ, ಒಂದು ಕ್ರಾಂತಿ ಎಂಬುದನ್ನು ಶರಣರು ತಮ್ಮ ಕಾಲಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗಿ ಆಲೋಚಿಸಿದರಿಂದ ಮತ್ತು ಅನುಷ್ಠಾನಕ್ಕೂ ತಂದಿದ್ದರಿಂದ ಆ ಯುಗ ಇನ್ನೂ ಕಾಲ ಪಕ್ವವಾಗಿಲ್ಲದ್ದರಿಂದ ಆ ಕ್ರಾಂತಿಯ ಯಶಸ್ಸು ಅಲ್ಪಾವಧಿಯಾದದ್ದು ಅನಿವಾರ್ಯವಾಯಿತು. ಆದರೆ ಈ ಹೊತ್ತು ನಾವು ಶರಣರ ವಿಚಾರಧಾರೆಗಳನ್ನು ಅರ್ಥಮಾಡಿಕೊಳ್ಳುವ ಸ್ಥಿತಿಯಲ್ಲಿದ್ದೆವೆ, ಹಾಗೆ ನೋಡಿದರೆ ಅವರು ಇಂದಿಗೂ ನಮಗಿಂತ ಮುಂದೆ ಹೋಗಿ ಆಲೋಚಿಸಿದ್ದಾರೆ ಎನ್ನಬಹುದು.*

***ಮುಖ್ಯಪದಗಳು* (Keywords):** ವಚನ ಸಾಹಿತ್ಯ, ವೈಚಾರಿಕತೆ, ಶಿವಶರಣರು, ಸಾಮಾಜಿಕ ಸುಧಾರಣೆ.

## ಪೀಠಿಕೆ

ಪುರೋಹಿತ ಶಾಹಿ ಮತ್ತು ರಾಜಶಾಹಿಯನ್ನು ಧಿಕ್ಕರಿಸಿ ಅನಿಷ್ಟ ಜಡ ವ್ಯವಸ್ಥೆಯನ್ನು ಛಿದ್ರಗೊಳಿಸುವ ಮೂಲಕ ಅದನ್ನು ಪ್ರಶ್ನಿಸುವ ಎದೆಗಾರಿಕೆಯನ್ನು ವ್ಯಕ್ತಿಗತ ನೆಲೆಯಲ್ಲಿ ನಡೆಯದೆ ಸಮಷ್ಟಿಯ ನೆಲೆಯಲ್ಲಿ ನಡೆದ ಪ್ರಕ್ರಿಯೆ ಎಂದರೆ ಅದು ವಚನ ಚಳವಳಿ, ಇದನ್ನು ನಾವು ವೈಚಾರಿಕ ಕ್ರಾಂತಿ ಎನ್ನಬಹುದು. ಕಲ್ಯಾಣದ ಕ್ರಾಂತಿಗೂ ಹಾಗೂ ಪ್ರಾನ್ಸ್ ಮಹಾಕ್ರಾಂತಿಗೂ ಹೋಲಿಸಿದರೆ ಪ್ರಾನ್ಸ್ ಕ್ರಾಂತಿ ರಾಜಕೀಯ ಪ್ರೇರಿತವಾಗಿ ಕಂಡುಬರುತ್ತದೆ. ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವಕ್ಕಾಗಿ ಅಲ್ಲಿಯ ಜನ ಹೋರಾಟ

*Please cite this article as:* *ಜಗನ್ನಾಥ .ಎನ್ ಮತ್ತು ಪಿ.ನಾಗರಾಜ. (2021). ವಚನ ಸಾಹಿತ್ಯ ಮತ್ತು ವೈಚಾರಿಕತೆ. ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(3). ಪು.ಸಂ. 58–63*

ನಡೆಸಿದರಾದರು ಆಧ್ಯಾತ್ಮದ ಪರಿಧಿ ಅವರಿಂದ ದೂರವೇ ಉಳಿಯಿತು. ಫ್ರಾನ್ಸ್ ಕ್ರಾಂತಿಗೂ ಮೊದಲು ಬಹಳ ವರ್ಷಗಳ ಹಿಂದೆಯೇ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವಕ್ಕಾಗಿ ಮತ್ತು ವೈಚಾರಿಕತೆಗಾಗಿ ಬಹುದೊಡ್ಡ ಕ್ರಾಂತಿಯನ್ನು ಕನ್ನಡದ ನೆಲದಲ್ಲಿ ಹುಟ್ಟುಹಾಕಿದ ಕೀರ್ತಿ ವಚನಗಾರರಿಗೆ ಸಲ್ಲುತ್ತದೆ.

ವಚನ ಎಂದರೆ ಮಾತು, ಭಾಷೆ, ಪ್ರಮಾಣ ಎಂಬ ಅರ್ಥಗಳಿವೆ. ಆದ್ಯರ ಅಥವಾ ಪುರಾತನರ ಮಾತು ಎಂಬ ಅರ್ಥ ಕೂಡ ಇದೆ. "ಚನ್ನಬಸವಣ್ಣ ಹೇಳುವಂತೆ ಶಬ್ದಸೋಪಾನದ ಬಲದಿಂದ ನಿಶಬ್ದ ಸೋಪಾನವ ಕಟ್ಟಿ ನಡೆಸಿದವರು ನಮ್ಮ ಪುರಾತನರು. ಶಿವಶರಣರ ಅನುಭಾವದ ನುಡಿ ದೇವಲೋಕಕ್ಕೆ ದಾರಿಯೆಂದೂ, ಭಕ್ತರ ಮನದ ಮೈಲಿಗೆಯ ಕಳೆಯಲೆಂದು ಗೀತಮಾತೆಂಬ ಜ್ಯೋತಿಯ ಬೆಳಗಿಟ್ಟರೆಂದೂ ಅವನು ಹೇಳುವನು. ಜ್ಞಾನದೀಪ್ತಿಯನ್ನು ಬೆಳಗುವ ತೈಲವಾವುದೆಂದರೆ ಶಿವಶರಣರ ನುಡಿಗಡಣದ ಒಸರು, ಆ ಒಸರಿಂಗಲ್ಲದೆ ಜ್ಞಾನಪ್ರಕಾಶವಿಲ್ಲ. ಅದು ತಾನೆಂಬ ನಿಶ್ಚಯವ ತೋರುವುದು. ಹೀನ ಜಡತೆಯ ಮುಸುಕಿನ ಗ್ರಂಥಿಯನಳಿವುದು, ಭಾನು ಬಂದಡೆ ಕತ್ತಲೆ ಹರಿವಂತೆ ಬುಧರೊಳು ನೀನಿರಲು ಕರ್ಮ ಹರಿವುದು ಎಂದೂ ಅವನು ಹೇಳುವನು.[1] ಈ ಮೇಲಿನ ಅಂಶಗಳನ್ನು ಆವಲೋಕಿಸಿದಾಗ ವಚನಕಾರರ ಅನುಭಾವದ ನೆಲೆಗಳಲ್ಲಿ ವೈಚಾರಿಕ ಚಿಂತನೆಗಳನ್ನು ಕಂಡುಕೊಳ್ಳಬಹುದು.

**ಶರಣರ ವೈಚಾರಿಕತೆ**

ಕನ್ನಡ ಸಾಹಿತ್ಯದಲ್ಲಿ ವೈಚಾರಿಕತೆಗೆ ತನ್ನದೇ ಆದ ಒಂದು ಪರಂಪರೆಯಿದೆ. ಆ ಪರಂಪರೆ ಬಹುಮುಖ್ಯವಾಗಿ ವಚನಕಾರರಿಂದ ಪ್ರಾರಂಭವಾಗುತ್ತದೆ. ವಚನ ಸಾಹಿತ್ಯದ ಕಾಲವು ಸಂಕ್ರಮಣ ಕಾಲವಾಗಿದ್ದರಿಂದ ಅಲ್ಲಿ ನಡೆದ ವಿಚಾರ ಸಂಘರ್ಷ ಇದಿಂಗೂ ಪ್ರಸ್ತುತವಾಗುತ್ತದೆ. ಹೆಣ್ಣು–ಹೊನ್ನು–ಮಣ್ಣುಗಳಿಗಾಗಿ ಬಡೆದಾಡುತ್ತಾ ರಾಜ ಮಹಾರಾಜರ ಬದುಕೇ ನಮ್ಮ ಸಾಹಿತ್ಯದಲ್ಲಿ ಹಾಗೂ ಚರಿತ್ರೆಯಲ್ಲಿ ವಿಜೃಂಭಿಸುತ್ತೀರುವಾಗ ವಿಚಾರ ಸಂಘರ್ಷ ನಡೆಸಿ ಜನಪರ ಹೋರಾಟವನ್ನು ಹುಟ್ಟುಹಾಕಿದ ವಚನಕಾರರ ಬದುಕು– ಬರಹ ವಿಶಿಷ್ಟವಾಗಿ ಕಾಣುತ್ತದೆ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವೈಚಾರಿಕ ಕ್ರಾಂತಿಯನ್ನು ನಡೆಸಿದ ಕೀರ್ತಿ ವಚನಕಾರರಿಗೆ ಸಲ್ಲುತ್ತದೆ. ಆದ್ದರಿಂದಲೇ ವಚನಕಾರರು ಕನ್ನಡದಲ್ಲಿ ವೈಚಾರಿಕ ಪರಂಪರೆಗೆ ಮೂಲಪುರುಷರಾಗುತ್ತಾರೆ.[2] ಬಹಳ ಮುಖ್ಯವಾಗಿ ವೈಚಾರಿಕ ಪ್ರಜ್ಞೆ ಬೆಳೆದ ಮೇಲೆ ಮನುಷ್ಯನಲ್ಲಿ ಪ್ರಚಾರಕ್ಕಿಂತ ವಿಚಾರ ಪ್ರಧಾನವಾಗಬೇಕು ಮಾತಿಗಿಂತ ಕೃತಿ ಮುಖ್ಯವಾಗಬೇಕು, ಆಗ ವ್ಯಕ್ತಿನಿಷ್ಠವಾದದ್ದು ವಸ್ತುನಿಷ್ಠವಾಗುತ್ತದೆ, ಢಾಂಬಿಕತೆ, ಸ್ವಾರ್ಥ, ಸಣ್ಣತನದಿಂದ ಕೂಡಿದ ಮನಸ್ಸು, ವಿಚಾರ ಸಂಘರ್ಷದಲ್ಲಿ ತೊಡಗಿದಾಗ ಎತ್ತರವಾಗಿ ಬೆಳೆದು ನಿಲ್ಲುತ್ತದೆ.

ವಿಶ್ವಸಾಹಿತ್ಯಕ್ಕೆ ಕನ್ನಡದ ವಚನ ಸಾಹಿತ್ಯ ಕೊಟ್ಟಂತಹ ಪ್ರಜಾಪ್ರಭುತ್ವದ ಕಲ್ಪನೆ ಆದರ್ಶವಾದುದು ಮತ್ತು ಅನುಕರಣೀಯವಾದುದು. ಬಸವಾದಿ ಶರಣರು ತಮಗೆ ಉಂಟಾದ ಅರಿವು, ಅನುಭವ ಮತ್ತು ಆನಂದವನ್ನು ಅಲ್ಲದೆ ನಿತ್ಯ ಜೀವನದಲ್ಲಿ ತಮಗಾದ ಅನಿಸಿಕೆಗಳನ್ನು ವಚನಗಳಿಲ್ಲಿ ಅಭಿವ್ಯಕ್ತ ಪಡಿಸಿದ್ದಾರೆ. 'ದೇಹವೇ ದೇಗುಲ' ಎಂಬ ಪರ್ಯಾಯ ಕಲ್ಪನೆ ಸಾಕಾರಗೊಳಿಸಿದ್ದು, ಸ್ತ್ರೀ ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿಗೆ ಪೂರಕ ಪರಿಸರ ನಿರ್ಮಿಸಿದ್ದು, ವೈದಿಕ ಆಚರಣೆಗಳಲ್ಲಿನ ಸಾಂಸ್ಥಿಕ ವ್ಯವಸ್ಥೆಗಳನ್ನು ವಿರೋಧಿಸಿದ್ದು, ಪರ್ಯಾಯ ಕ್ರಮದ ಅನ್ವೇಷಣೆಗೆ ತೊಡಗಿದ್ದು 'ಕ್ರಿಯೆ'ಗಳ ಮೂಲಕ ಪಿಡುಗಾಗಿದ್ದ ಹುಟ್ಟು, ಸಾವು, ಮದುವೆ,

ಪೂಜೆಗಳನ್ನು ಭಿನ್ನವಾಗಿ ನೆಲೆಗೊಳಿಸಲು ಯತ್ನಿಸಿದ್ದು, ಧರ್ಮದ ಮೂಲಕ ನಡೆಯುವ ಶೋಷಣೆಯನ್ನು ವಿರೋಧಿಸಿ, ತಿರಸ್ಕರಿಸಿದ್ದು, ಧರ್ಮಾಚರಣೆಯ ಬಾಹ್ಯ ಲಕ್ಷಣಗಳಾದ ಗಂಧ, ಕುಂಕುಮ, ನಾಮ ಇತ್ಯಾದಿಗಳನ್ನು ಕೈಬಿಟ್ಟಿದ್ದು, ಇಷ್ಟಲಿಂಗ ಕಲ್ಪನೆ ಜಾರಿಗೊಳಿಸಿದ್ದು, ವೈಯಕ್ತಿಕ ಸ್ವಾತಂತ್ರ್ಯ ಹಾಗೂ ಸರಳತೆಯನ್ನು ಬದುಕಿಗೆ ಅಳವಡಿಸಿದ್ದು. ಈ ಬಗೆಯ ಆಲೋಚನೆಗಳು ಬಿಂಬಿತವಾಗಿರುವ ಕೆಲವು ವಚನಗಳನ್ನು ಗಮನಿಸಬಹುದು. ಇಲ್ಲೆಲ್ಲಾ ಅದಕ್ಕೆ ವೈಜ್ಞಾನಿಕ, ಧನಾತ್ಮಕ, ಪ್ರಾಯೋಗಿಕ ಎಂದು ಸಾರಾಸಗಟಾಗಿ ಒಪ್ಪಿಕೊಳ್ಳುವ ಬದಲು ಬಹುಶ; ದೊಡ್ಡ ಪ್ರಮಾಣದಲ್ಲಿ, ಕನ್ನಡ ನೆಲದಲ್ಲಿ ನಡೆದ 'ಪರ್ಯಾಯ ಆಲೋಚನಾ ಕ್ರಮದ ವಿವಿಧ ವಿನ್ಯಾಸಗಳ ಮೊತ್ತ' ಎಂದು ವಚನ ಚಳುವಳಿಯನ್ನು ಪೃಥಕ್ಕರಿಸಿದಲ್ಲಿ ವಚನಕಾರರ ಆಲೋಚನೆ ಮತ್ತು ಅಭಿವ್ಯಕ್ತಿ ವಿಧಾನಗಳನ್ನು ಗ್ರಹಿಸಬಹುದು.

"ಆನು ಒಲಿದಂತೆ ಹಾಡುವೆ" ಎಂಬ ಬಸವಣ್ಣನವರ ಮಾತು ವಚನ ವೈಶಿಷ್ಟ್ಯವನ್ನು ಸೂಚಿಸುವುದಷ್ಟೆ ಅಲ್ಲದೆ, ಸಂಪ್ರದಾಯ ವಿರೋಧಿ ಧೋರಣೆಯನ್ನು ಸಮರ್ಥವಾಗಿ ಸಂಕೇತಿಸುತ್ತದೆ, ವೇದ ಶಾಸ್ತ್ರಾಗಮನಿಷ್ಟವಾದ ಪುರೋಹಿತಶಾಹಿಯನ್ನು ಶರಣರು ನೇರವಾಗಿಯೇ ಖಂಡಿಸಿ ನಿರಾಕರಿಸಿದರು, ಆದರೆ ಅವರ ರಾಜತ್ವ ನಿರಾಕರಣೆ ಅಷ್ಟು ಪ್ರಖರವಾಗಿರದೆ, ಪರೋಕ್ಷವಾದದ್ದು. ರಾಜಪ್ರಭುತ್ವ ಪ್ರೋತ್ಸಾಹಿಸುವ ಎಲ್ಲ ಮೌಲ್ಯಗಳನ್ನು ಅಥವಾ ಅಪಮೌಲ್ಯಗಳನ್ನು ಶರಣರು ಅಲ್ಲಗೆಳೆದರೆಂಬುದನ್ನು ಗಮನಿಸಬೇಕು. "ಆಸೆಯೆಂಬುದು ಅರಸಿಂಗಲ್ಲದೆ ಶಿವಭಕ್ತರಿಗುಂಟೇ?"ಎಂಬ ಆಯ್ದಕ್ಕಿ ಲಕ್ಕಮ್ಮನ ಉಕ್ತಿಯಲ್ಲಿ, "ಬಿಜ್ಜಳನ ಭಂಡಾರ ಎಮಗೇಕಯ್ಯ?"ಎಂಬ ಬಸವಣ್ಣನವರ ಉಕ್ತಿಯಲ್ಲಿ ರಾಜತ್ವವಿರೋಧಿ ನಿಲುವು ಇಂಗಿತವಾಗಿದೆ. ಶರಣರಾದರೊ ನಿರಾಶಾ ಮಹಾತ್ಮರು. ಕಲ್ಯಾಣದ ಕ್ರಾಂತಿ ಬಿಜ್ಜಳನ ಕೊಲೆಯಲ್ಲಿ ಪರ್ಯವಸಾನಗೊಂಡಿತೆಂದು ಹೇಳುತ್ತಾರೆ, ಅದು ಎಷ್ಟರಮಟ್ಟಿಗೆ ಐತಿಹಾಸಿಕ ಸತ್ಯವೋ, ಆ ಕೊಲೆಗೆ ಯಾರು ಕಾರಣರೋ ಖಚಿತವಾಗಿ ತಿಳಿಯದು, ಆದರೆ ರಾಜಶಾಹಿಯ ನಿರಾಕಾರಣ, ನಿರಸನಗಳಿಗೆ ಅದೊಂದು ಸಂಕೇತವೆಂದು ಭಾವಿಸಬಹುದು. ವೈಚಾರಿಕ ದೃಷ್ಟಿಯಿಂದ ವಚನಕಾರರ ಕ್ರಾಂತಿಗೆ ಸದೃಶ್ಯವಾದದ್ದು ಪ್ರಾಯಶ: ಜಗತ್ತಿನ ಇತಿಹಾಸದಲ್ಲಿ ಇನ್ನೊಂದು ಕಂಡುಬರುವುದಿಲ್ಲ ಎಂದರೆ ಉತ್ಪ್ರೇಕ್ಷೆಯಾಗಲಾರದು. ವಚನಕಾರರು ಸಾರತ: ಅಧ್ಯಾತ್ಮಜೀವಿಗಳು; ಅವರ ಆಂದೋಲನ ಪ್ರಧಾನವಾಗಿ ಧಾರ್ಮಿಕವಾದದ್ದು. ಆದರೆ ಅದು ಅಪ್ರತ್ಯಕ್ಷವೆಂಬಂತೆ ಸಾಮಾಜಿಕ, ಆರ್ಥಿಕ ಆಯಾಮಗಳನ್ನೂ ಮೈಗೂಡಿಸಿಕೊಂಡಿದೆಯೆಂಬುದು ಅದರ ಅನನ್ಯತೆ, ಶರಣರು ಇಹ ಪರಗಳನ್ನು, ಲೌಕಿಕ, ಅಲೌಕಿಕಗಳನ್ನು ಬೇರೆ ಬೇರೆ ಘಟಕಗಳನ್ನಾಗಿ ಬಗೆಯಲಿಲ್ಲ, ಎರಡನ್ನು ಏಕಾಖಂಡವಾಗಿ ತೆಗೆದುಕೊಂಡರು ಎಂಬುದು ಮುಖ್ಯ."ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿ ಭೋ" ಎಂದು, ಬಸವಣ್ಣನವರು ಆಚಾರವೇ ಸ್ವರ್ಗ, ಅನಾಚಾರವೇ ನರಕ" ಇತ್ಯಾದಿಯಾಗಿ ಪುನರ್ ಮೌಲ್ಯಮಾಪನ ಮಾಡುತ್ತಾರೆ. ಮತ್ತು "ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರು", ವಚನಕಾರರ ದೃಷ್ಟಿಯಲ್ಲಿ ಮುಕ್ತಿ ಎಂಬುದು ಸತ್ತು ಪಡೆಯತಕ್ಕದ್ದಲ್ಲ, ಬದುಕಿರುವಾಗಲೆ ಗಳಿಸಬೇಕಾದದ್ದು.

ವರ್ಣಾಶ್ರಾಮ ವ್ಯವಸ್ಥೆಯನ್ನು ವಿರೋಧಿಸಿ ಅದರಲ್ಲಿನ ಅಮಾನವೀಯ ಮುಖಗಳ ಅನಾವರಣಕ್ಕೆ ಯತ್ನಿಸಿದ್ದು; ಮಾನವೀಯ ಸಂಬಂಧಗಳನ್ನು ಗುರುತಿಸಿ ಅರಿವಿಗೆ ಆದ್ಯತೆ ನೀಡಿದ್ದು ಅಂತರಂಗ ಶುದ್ಧಿಗೆ ಬದ್ದವಾಗಿದ್ದು ವೇಶ ಧರಿಸಿ ಆಚರಣೆ ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಶೋಷಣೆಯನ್ನು ಗುರುತಿಸಿದ್ದು

ಧಿಕ್ಕರಿಸಿದ್ದು ಜಾತಿ ಭೇದ ಬೇಡ ಎಂದು ಆಯಾ ಜನರ ಉಪಯೋಗದ ಮಾದರಿಗಳಿಂದಲೇ ನಿದರ್ಶನ ನೀಡಿದ್ದಾರೆ. ವಚನಕಾರರು ತಮ್ಮ ಅನೇಕ ವಚನಗಳಲ್ಲಿ ಪರಂಪರೆಯಲ್ಲಿ ರೂಢಿಗೆ ಬಂದ ಆಚರಣೆಗಳನ್ನು ವೈಜ್ಞಾನಿಕವಾಗಿ ಅಲ್ಲಗೆಳೆಯುತ್ತಾರೆ ಉದಾಹರಣಗೆ ಬಸವಣ್ಣನ ವಚನಗಳನ್ನು ಗಮನಿಸಬಹುದು.

***ವೇದಕ್ಕೆ ಒರೆಯ ಕಟ್ಟುವೆ;***
***ಶಾಸ್ತ್ರಕ್ಕೆ ನಿಗಳನಿಕ್ಕುವೆ,***
***ತರ್ಕದ ಬೆನ್ನಬಾರನೆತ್ತುವೆ,***
***ಆಗಮದ ಮೂಗ ಕೊಯಿವೆ;***
***ನೋಡಯ್ಯಾ ಮಹಾದಾನಿ ಕೂಡಲ ಸಂಗಮದೇವಾ***
***ಮಾದಾರ ಚೆನ್ನಯ್ಯನ ಮನೆಯ ಮಗ ನಾನಯ್ಯಾ!***

ಈ ವಚನದಲ್ಲಿ ವೇದ, ಶಾಸ್ತ್ರ, ತರ್ಕ, ಆಗಮಗಳನ್ನು ನಾಶಮಾಡುವೆ ಎಂಬ ವಿಚಾರವಿದೆ. ವಚನ ಸಾಹಿತ್ಯದಲ್ಲಿ ಹೆಣ್ಣನ್ನು ಪರಿಭಾವಿಸುವ ರೀತಿಯನ್ನು ಗಮನಿಸಿದಾದ ಹೆಣ್ಣು ಬರಿ ಗಂಡನ ಸೇವೆಯಲ್ಲಿ ಕಾಲಹರಣಮಾಡುತ್ತಾ ಹೋಗುವವಳಲ್ಲ ಅವಳಿಗೂ ತನ್ನದೇ ಆದ ಸಾಮರ್ಥ್ಯವಿದೆ, ಭೌದ್ಧಿಕ ಶಕ್ತಿಯಿದೆ, ಸ್ವಚ್ಚಂದದ ಭಾವನೆಗಳಿವೆ, ಆಕೆಯು ವಿಭಿನ್ನವಾಗಿ ಯೋಚಿಸಬಲ್ಲಳು ಎಂಬುದನ್ನು ಮನವರಿಕೆ ಮಾಡಿಕೊಟ್ಟಿದ್ದಾರೆ. ಅಲ್ಲಮಪ್ರಭು ಅವರ ಈ ಕೆಳಗಿನ ವಚನದಲ್ಲಿ ಹೆಣ್ಣು ಮಾಹೆಯಲ್ಲ ಎಂದು ತೋರಿಸಿಕೊಟ್ಟಿದ್ದಾರೆ.

***ಹೆಣ್ಣು ಮಾಯೆ ಎಂಬರು, ಹೆಣ್ಣು ಮಾಯೆಯಲ್ಲ***
***ಹೊನ್ನು ಮಾಯೆ ಎಂಬರು, ಹೊನ್ನು ಮಾಯೆಯಲ್ಲ***
***ಮಣ್ಣು ಮಾಯೆ ಎಂಬರು, ಮಣ್ಣು ಮಾಯೆಯಲ್ಲ***
***ಮನದ ಮಂದಣ ಆಸೆಯೇ ಕಾಣಾ ಗುಹೇಶ್ವರ.***

ಮನಸ್ಸನ್ನು ಚಂಚಲಿಸುವ ವಸ್ತುಗಳ ಜೊತೆಗೆ ಹೆಣ್ಣನ್ನು ಸೇರಿಸಿ, ಅದು ಮಾಯೆಯೆಂದು ಹೇಳುವ ಲೋಭಿ ಮನಸ್ಸುಗಳಿಗೆ ಅದು ಮಾಯೆಯಲ್ಲ, ಪ್ರತಿಯೊಬ್ಬರು ಮನಸ್ಸಿನಲ್ಲಿ ಸೃಜಿಸುವ ಆಸಯೇ ಮಾಯೆಯಾಗಿರುತ್ತದೆ ಎಂಬುದನ್ನು ಇಲ್ಲಿ ಮನವರಿಕೆ ಮಾಡಲಾಗಿದೆ. ಇವುಗಳ ಮೇಲಿನ ಆಸೆ ವ್ಯಕ್ತಪಡಿಸುವ ಪ್ರತಿಯೊಬ್ಬ ಚಂಚಲಿತ ಮನುಷ್ಯನು ಮನಸ್ಸನ್ನು ಹಿಡಿತದಲ್ಲಿಟ್ಟುಕೊಳ್ಳುವುದು ಅವರವರ ಕರ್ತವ್ಯವೆನ್ನುವುದು ಬದ್ದತೆ ಮರೆದರೆ ಹೆಣ್ಣನ್ನು ಮಾಯೆಯನ್ನಲು ಸಾಧ್ಯವಿಲ್ಲವೆನುತ್ತಾರೆ ಅಲ್ಲಮಪ್ರಭು. ದೇವರಿಗೆ ಭಕ್ತಿಯನ್ನು ತೋರುವುದಕ್ಕೆ ಹಲವು ಮಾರ್ಗಗಳಿವೆ ದೇವರ ಮೂರ್ತಿ ಅಥವಾ ಪಟಗಳಿಗೆ ಪೂಜೆ ಮಾಡುವುದು, ದೇವಸ್ಥಾನಗಳಿಗೆ ಸುತ್ತಿಬರುವುದು, ದೇವರ ಸ್ತುತಿ ಮಾಡುವುದು, ಕುರಿ, ಕೋಳಿ ಬಲಿ ಕೊಡುವುದನ್ನು ವಚನಕಾರರು ಒಪ್ಪಲಿಲ್ಲ. ರಾಯಮ್ಮನ ವಚನ ಹೀಗೆದೆ.

***ಕಾಯಕದಲ್ಲಿ ನಿರತನಾದಡೆ***
***ಗುರುದರ್ಶನವಾದರೂ ಮರೆಯಬೇಕು***
***ಲಿಂಗಪೂಜೆಯಾದಡೂ ಮರೆಯಬೇಕು***

*ಜಂಗಮ ಮುಂದೆ ನಿಂದಿದ್ದಡೂ ಹಂಗ ಹರಿಯಬೇಕು*
*ಕಾಯಕವೇ ಕೈಲಾಸವಾದ ಕಾರಣ*
*ಅಮರೇಶ್ವರ ಲಿಂಗವಾಯಿತ್ತಾದಡೂ ಕಾಯಕದೊಳಗು*

ನಮ್ಮ ಬದುಕಿಗೆ ಅತ್ಯಗತ್ಯವಾದ ದುಡಿಮೆಗಿಂತ ದೊಡ್ಡದಾದ ಭಕ್ತಿಯಿಲ್ಲ ಎನ್ನುವುದನ್ನು ಈ ವಚನ ಕಾಯಕ ಮಹತ್ವವನ್ನು ಪ್ರತಿಪಾದಿಸುತ್ತದೆ.ಬಹುತೇಕ ವಚನಕಾರರದು ಭಾವುಕತೆಯನ್ನು ಮೀರಿದ ವೈಜ್ಞಾನಿಕ, ವೈಚಾರಿಕ ದೃಷ್ಟಿಕೋನ.ಯಾವುದೇ ಸಂಪ್ರದಾಯ, ಆಚರಣೆಗಳು ವಿಚಾರಶೀಲತೆಯನ್ನು ಕಳೆದುಕೊಂಡು ಯಾಂತ್ರಿಕವಾದಾಗ ಅವು ಯಾವ ರೀತಿಯಲ್ಲಿಯೂ ಪ್ರಯೋಜನಕ್ಕೆ ಬರುವುದಿಲ್ಲ ಎನ್ನುವುದನ್ನು ವಚನಸಾಹಿತ್ಯ ಪ್ರತಿಪಾದಿಸುತ್ತದೆ.

*"ನೀರ ಕಂಡಲ್ಲಿ ಮುಳುಗುವರಯ್ಯ*
*ಮರವ ಕಂಡಲ್ಲಿ ಸುತ್ತುವರಯ್ಯ*
*ಬತ್ತುವ ಜಲವನೊಣಗುವ ಮರನ*
*ಮೆಚ್ಚಿದವರು ನಿಮ್ಮನ್ನೆತ್ತಬಲ್ಲರು,*
*ಕೂಡಲಸಂಗಮದೇವಾ"*[3]

*"ಏನಬಂದಿರಿ, ಹದುಳವಿದ್ದಿರ" ಎಂದರೆ ನಿಮ್ಮ ಮೈಸಿರಿ ಹಾರಿಹೋದುದೆ?*
*'ಕುಳ್ಳಿರೆಂ'ದರೆ ನೆಲ ಕುಳಿಹೋದುದೆ?*
*ಒಡನೆ ನುಡಿದರೆ ಶಿರ ಹೊಟ್ಟೆಯೊಡೆವುದೆ?*
*ಕೊಡಲಿಲ್ಲದಿದ್ದರೊಂದು ಗುಣವಿಲ್ಲದಿರ್ದಡೆ*
*ಕೆಡಹಿ ಮೂಗ ಕೊಯ್ಯದೆ ಮಾಣ್ಬದೆ ಕೂಡಲಸಂಗಮದೇವನು?*[4]

ಬಸವಣ್ಣನವರ ಈ ಮೇಲಿನ ವಚನಗಳಲ್ಲಿ ಕಂಡು ಬರುವ ಧಾರ್ಮಿಕ ಭಕ್ತಿ ಇಲ್ಲದರು ಯಾವುದೇ ರೀತಿಯ ವ್ರತಾಚಾರಗಳನ್ನು ಆಚರಿಸಿದರು ಅದು ಕೇವಲ ವ್ಯರ್ಥ ಭಕ್ತಿ. ನೀರ ಕಂಡಲ್ಲಿ ಮುಳುಗುವುವರಿಗೆ ಮರ ಕಂಡಲ್ಲಿ ಸುತ್ತುವವರನ್ನು ಕಂಡು ಈ ರೀತಿಯಾಗಿ ವಿಡಂಭಿಸಿದ್ದಾರೆ. ಮತ್ತೊಂದು ವಚನದಲ್ಲಿ ಸುಸಂಸ್ಕೃತರಾದವರು ತಮ್ಮ ಮನೆಗೆ ಬಂದವರ ಯೋಗ ಕ್ಷೇಮ ವಿಚಾರಿಸದೆ, ಒಳ್ಳೆಯ ಮಾತನ್ನು ಆಡದೇ ಬಿಗುಮಾನಗಳಿಂದ ಕೂಡಿರುವ ಜನರನ್ನು ಕಂಡಾಗ ಕಟುವಾಗಿ ಟೀಕಿಸದ್ದಾರೆ. ಸದಾಚಾರ ಸದ್ವಿನಯಗಳಿಂದ ಅನ್ಯೋನ್ಯ ಸಂಬಂಧಗಳನ್ನು ರೂಪಿಸಿಕೊಳ್ಳಬೇಕೆಂಬ ಆಶಯವಿದೆ ಹೀಗಾಗಿಯೇ ಬಸವಣ್ಣನವರು **"**ಅಯ್ಯಾ ಎಂದೊಡೆ ಸ್ವರ್ಗ, ಎಲವೊ ಎಂದೊಡೆ ನರಕ**"** ಎಂದು ಹೇಳಿರುವುದು.

**ಉಪಸಂಹಾರ**

ಒಟ್ಟಾರೆ, ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಚನ ಕ್ರಾಂತಿ ಒಂದು ವಿಶಿಷ್ಟ ಘಟ್ಟ, ಈ ವಿಶಿಷ್ಟತೆಗಿರುವ ಆಯಾಮ 'ವೈಚಾರಿಕತೆ' ಎನ್ನಬಹುದು. ಆಧುನಿಕ ಕಾಲ ಸಂದರ್ಭದ ಮಾನದಂಡಗಳ ಅನ್ವಯದ ಬದಲು ಸಾಮಾಜಿಕ, ಸಾಂಸ್ಕೃತಿಕ ಮತ್ತು ಚಾರಿತ್ರಿಕ ಚೌಕಟ್ಟಿನಲ್ಲಿ ವಿಶ್ಲೇಷಣೆ ಕೈಗೊಂಡಲ್ಲಿ ಈ ವೈಚಾರಿಕತೆಯ

ತಾತ್ವಿಕತೆ, ನೆಲೆ ಮತ್ತು ಅಗತ್ಯಗಳು ನಿಲುಕುತ್ತವೆ. ಬಹುಮುಖಿ ಸಮಾಜದ ಮೊದಲಘಟ್ಟದ ಬಹುದನಿಯಾದದ್ದು ವಚನ ಚಳವಳಿಯ ಹೆಗ್ಗಳಿಕೆ. ಬಸವಾದಿ ಶರಣರಲ್ಲಿ ಅಲ್ಲಮ, ಬಸವ, ಸಿದ್ದರಾಮ ಮೊದಲಾದವರ ಜೊತೆ ಇತರ ವಚನಕಾರರು ತಮಗೆ ಅನಿಸಿದ ಅನುಭವದ ನುಡಿಗಳಲ್ಲಿ ಅಂತರಂಗವನ್ನು ಕಲಕುವ ಮತ್ತು ಶುದ್ಧಿಗೊಳಿಸುವ ವಿಚಾರಗಳನ್ನು ಪ್ರತಿಪಾದಿಸಿದರು.

**ಕೊನೆಟಿಪ್ಪಣಿಗಳು**

1. ವಿದ್ಯಾಶಂಕರ ಎಸ್. (1993). ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ, ಸಂಪುಟ– 15, ವಚನ ಪರಿಭಾಷಾಕೋಶ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು. ಪು. 201 –202.
2. ಬಸವರಾಜ ಸಬರದ. (2017). ಚಿಂತನ ಲೇಖನಗಳು. ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು. ಪು. 39
3. ಸೀತಾರಾಮಯ್ಯ ವಿ ಮತ್ತು ಜಿ.ವೆಂಕಟಸುಬ್ಬಯ್ಯ. (ಸಂ.) (2012). ಕವಿ ಕಾವ್ಯ ಪರಂಪರೆ ಬಸವೇಶ್ವರ. ಸಪ್ನ ಬುಕ್ ಹೌಸ್, ಬೆಂಗಳೂರು. ಪು. 58
4. ಅದೇ., ಪು.65

**ಪರಾಮರ್ಶನ ಗ್ರಂಥಗಳು**


- ಕಾಳೇಗೌಡ ನಾಗವಾರ. (2008). ಸೃಜನಶೀಲ ವೈಚಾರಿಕತೆ: ವಿಮರ್ಶ ಲೇಖನಗಳು. ಸಪ್ನ ಬುಕ್ ಹೌಸ್, ಬೆಂಗಳೂರು
- ಕೃಷ್ಣಕುಮಾರ್ ಸಿ. ಪಿ. (2007) ಸಾಹಿತ್ಯ ಶೀಲನ. ಪ್ರಸಾರಾಂಗ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ.
- ಪೋತೆ, ಎಚ್. ಟಿ. (ಸಂ.) (2007). ವಿಚಾರ ಸಾಹಿತ್ಯ. ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು.
- ಲೋಕೇಶ್ ಅಗಸನಕಟ್ಟೆ. (2012). ಒಳಗಿನ ಬೆಳಗು. ಸಪ್ನ ಬುಕ್ ಹೌಸ್, ಬೆಂಗಳೂರು.
- ವಿದ್ಯಾಶಂಕರ ಎಸ್. (ಸಂ.) (1993). ವಚನ ಪರಿಭಾಷಾಕೋಶ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.
- ವಿಠಲರಾವ್ ಗಾಯಕ್ವಾಡ್. (2003). ಕುವೆಂಪು ಸಾಹಿತ್ಯದಲ್ಲಿ ವೈಚಾರಿಕತೆ. ಲಕ್ಷ್ಮೀ ಪ್ರಿಂಟಿಂಗ್, ಮೈಸೂರು.